# <u>ಕರ್ನಾಟಕ ವಿಧಾನ ಪರಿಷತ್ತು</u>

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 718
ಸದಸ್ಯರ ಹೆಸರು : ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾಗಿದ ದಿನಾಂಕ : 10-03-2026
ಉತ್ತರಿಸುವ ಸಚಿವರು : ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ KUIDFC ಅಡಿಯಲ್ಲಿ ಬರುವ ಹಲವಾರು ನಗರ ಮೂಲಸೌಕರ್ಯ ಯೋಜನೆಗಳು ದೀರ್ಘಕಾಲದಿಂದ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>
ಬಂದಿರುತ್ತದೆ.
<u>ವಿಶ್ವಬ್ಯಾಂಕ್ ನೆರವಿನ - ಕರ್ನಾಟಕ ನಗರ ನೀರು ಸರಬರಾಜು ಆಧುನೀಕರಣ ಯೋಜನೆ-</u> (KUWSMP) ಯಲ್ಲಿ ಬೆಳಗಾವಿ, ಕಲಬುರಗಿ ಮತ್ತು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಗಳ ವ್ಯಾಪ್ತಿ ಪ್ರದೇಶಗಳಿಗೆ ವಿನ್ಯಾಸ-ನಿರ್ಮಾಣ-ಕಾರ್ಯಾಚರಣೆ ಮತ್ತು ನಿರ್ವಹಣೆ-ವರ್ಗಾವಣೆ (DBOT) ಮಾದರಿಯಲ್ಲಿ ನಿರಂತರ 24/7 ಕುಡಿಯುವ ನೀರು ಸರಬರಾಜು ವ್ಯವಸ್ಥೆಯ ಸುಸ್ಥಿರ ಉನ್ನತೀಕರಣ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.
(ರೂ.ಕೋಟಿಗಳಲ್ಲಿ)
<table>
<tr><th rowspan="2">ಯೋಜನೆ</th><th rowspan="2">ಕಾಮಗಾರಿ ಪ್ರಾರಂಭ ದಿನಾಂಕ</th><th rowspan="2">ಕೆಪೆಕ್ಸ್ ಮೊತ್ತ</th><th rowspan="2">ಒಪೆಕ್ಸ್ ಮೊತ್ತ</th><th rowspan="2">ಒಟ್ಟು ಮೊತ್ತ</th><th colspan="2">ಸಾಧಿಸಿರುವ ಪ್ರಗತಿ</th></tr>
<tr><th>ಭೌತಿಕ</th><th>ಆರ್ಥಿಕ</th></tr>
<tr><td>ಬೆಳಗಾವಿ</td><td>15-06-2020</td><td>571.35</td><td>232.78</td><td>804.13</td><td>60%</td><td>42.5%</td></tr>
<tr><td>ಕಲಬುರಗಿ</td><td>10-06-2020</td><td>604.95</td><td>232.48</td><td>837.43</td><td>45.30%</td><td>39.3%</td></tr>
<tr><td>ಹುಬ್ಬಳ್ಳಿ-ಧಾರವಾಡ</td><td>12-06-2020</td><td>931.02</td><td>275.95</td><td>1206.97</td><td>55.5%</td><td>43.4%</td></tr>
<tr><td colspan="2">ಒಟ್ಟು</td><td>2107.32</td><td>741.21</td><td>2848.53</td><td></td><td></td></tr>
</table>
ಮೇಲಿನ ಯೋಜನೆಯನ್ನು ಕರಾರಿನ ನಿಯಮಾನುಸಾರ ಜೂನ್ 2025 ರಲ್ಲಿ ಪೂರ್ಣಗೊಳಿಸಬೇಕಾಗಿರುತ್ತದೆ,
ಅನ್ಯ ಇಲಾಖೆಗಳಾದ ರೈಲ್ವೆ, ರಾಷ್ಟ್ರೀಯ ಹೆದ್ದಾರಿ, ಅರಣ್ಯ ಇಲಾಖೆಗಳಿಂದ ಅನುಮತಿ ದೊರೆಯುವಲ್ಲಿ ವಿಳಂಬವಾಗಿರುತ್ತದೆ. ಭಾಗಶಃ ಗುತ್ತಿಗೆದಾರರಿಂದಲೂ ವಿಳಂಬವಾಗಿದ್ದು, ಕರಾರಿನ ನಿಯಮಾನುಸಾರ ಗುತ್ತಿಗೆದಾರರಿಗೆ ದಂಡ ವಿಧಿಸಲಾಗಿದೆ.
ಮೇಲಿನ ಅಂಶಗಳನ್ನು ಪರಿಗಣಿಸಿ, ಯೋಜನೆಯು ಪೂರ್ಣಗೊಳ್ಳಲು ಸ್ವಲ್ಪ ಪ್ರಮಾಣದ ವಿಳಂಬವಾಗುವ ಸಂಭವವಿದೆ.
</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಮೇಲಿನ ಕಾರಣಗಳಿಂದ ಯೋಜನೆಯನ್ನು ಬೆಳಗಾವಿ ನಗರಕ್ಕೆ ಡಿಸೆಂಬರ್-2026 ಹಾಗೂ ಹುಬ್ಬಳ್ಳಿ-ಧಾರವಾಡ ಮತ್ತು ಕಲಬುರಗಿ ನಗರಗಳ ಯೋಜನೆಯನ್ನು ಜೂನ್ -2027 ರಂದು ಪೂರ್ಣಗೊಳಿಸಲು ಉದ್ದೇಶಿಸಿ, ಕಾಲಾವಿಸ್ತರಣೆ ನೀಡಿದ್ದು, ಗುತ್ತಿಗೆದಾರರಿಗೆ ಪೂರ್ಣಗೊಳಿಸಲು ಕಟ್ಟುನಿಟ್ಟಿನ ಆದೇಶ ನೀಡಲಾಗಿದೆ.<br><br>**<u>ಏಷ್ಯನ್ ಅಭಿವೃದ್ಧಿ ಬ್ಯಾಂಕ್ ಮತ್ತು ಕೇಂದ್ರ ಪುರಸ್ಕೃತ ಅಮೃತ್ ನೆರವಿನ ಕರ್ನಾಟಕ ಸಮಗ್ರ ನಗರ ನೀರು ನಿರ್ವಹಣೆ ಮತ್ತು ಹೂಡಿಕೆ ಕಾರ್ಯಕ್ರಮ (KUWMIP)</u>**ದಡಿ ರಾಜ್ಯದ ಎಂಟು (8) ನಗರ ಸ್ಥಳೀಯ ಸಂಸ್ಥೆಗಳಾದ ದಾವಣಗೆರೆ, ಹರಿಹರ, ರಾಣೇಬೆನ್ನೂರು, ಬ್ಯಾಡಗಿ, ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ನಗರಗಳಲ್ಲಿ ಒಟ್ಟು 28 ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಅದರಲ್ಲಿ 21 ಕಾಮಗಾರಿಗಳು ಪೂರ್ಣಗೊಂಡಿದ್ದು, ಉಳಿದ 7 ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ಈ ಯೋಜನೆಗಳಿಗೆ ಅವಶ್ಯವಿರುವ ಜಾಗ ನೀಡಿಕೆಯಲ್ಲಿನ ವಿಳಂಬ, ಇತರೇ ಇಲಾಖೆಗಳಿಂದ ಅಂದರೆ MESCOM, HESCOM, BESCOM, PWD, NH, Railway ಅನುಮತಿ ಪಡೆಯುವ ಅವಧಿ ಹಾಗೂ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಪಾಲಿನ ವಂತಿಕೆಯನ್ನು ಸಕಾಲದಲ್ಲಿ ನೀಡದಿರುವುದರಿಂದ ಸದರಿ ಯೋಜನೆಗಳ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ.<br><br>ಆದ್ಯಾಗ್ಯೂ ಈ ಯೋಜನೆಯ ಎಲ್ಲಾ ಕಾಮಗಾರಿಗಳು ಪೂರ್ಣಗೊಳ್ಳುವ ಹಂತದಲ್ಲಿವೆ.<br><br>**<u>ಉತ್ತರ ಕರ್ನಾಟಕ ನಗರ ವಲಯ ಹೂಡಿಕೆ ಕಾರ್ಯಕ್ರಮದಡಿ (NKUSIP)</u>** ಡಾ\|\|ನಂಜುಂಡಪ್ಪ ಡಿ.ಎಂ ರವರ ವರದಿಯಂತೆ ಎನ್.ಕೆ.ಯು.ಎಸ್.ಐ.ಪಿ ಯೋಜನೆಯಡಿ ಏಷ್ಯನ್ ಬ್ಯಾಂಕ್ ನೆರವಿನೊಂದಿಗೆ 24 ನಗರ / ಪಟ್ಟಣಗಳಲ್ಲಿ ಪ್ರಮುಖವಾಗಿ ಮೂಲಭೂತ ಸೌಕರ್ಯದಡಿಯಲ್ಲಿ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಯೋಜನೆಯನ್ನು ಪರಿಷ್ಕೃತ ಮೊತ್ತ ರೂ.2662.00 ಕೋಟಿಯಲ್ಲಿ ಹಮ್ಮಿಕೊಳ್ಳಲಾಗಿತ್ತು.<br><br>ಯೋಜನೆಯಡಿ ಒಟ್ಟು 130 ಪ್ಯಾಕೇಜುಗಳನ್ನು ಕೈಗೊಳ್ಳಲಾಗಿತ್ತು. ಇವುಗಳಲ್ಲಿ 122 ಪ್ಯಾಕೇಜು ಕಾಮಗಾರಿಗಳು ಪೂರ್ಣಗೊಂಡಿದ್ದು, ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಗೆ ಹಸ್ತಾಂತರಿಸಲಾಗಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಎರಡು ಪ್ಯಾಕೇಜು ಕಾಮಗಾರಿಗಳನ್ನು ಎಡಿಬಿ ಸಾಲ ಮುಕ್ತಾಯವಾದ ಕಾರಣ, ಕೈಬಿಡಲಾಗಿದೆ.<br><br>ಉಳಿದ 6 ಪ್ಯಾಕೇಜುಗಳು ಅಂದರೆ 24x7 ಕುಡಿಯುವ ನೀರು ಸರಬರಾಜು ಕಾಮಗಾರಿಗಳನ್ನು ಹಾವೇರಿ, ಗದಗ-ಬೆಟಗೇರಿ, ಬಳ್ಳಾರಿ, ಹೊಸಪೇಟೆ, ರಾಯಚೂರು ಮತ್ತು ಸಿಂಧನೂರು ನಗರಗಳಲ್ಲಿ ಕೈಗೊಳ್ಳಲಾಗಿತ್ತು. ಗುತ್ತಿಗೆದಾರರಾದ ಮೆ\|\|ಎಸ್.ಪಿ.ಎಂ.ಎಲ್ ಇನ್ಫ್ರಾ ಲಿ, ರವರು ಡಿಸಂಬರ್-2022 ರಲ್ಲಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿ, ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ವಿವಾದ ಬಗೆಹರಿಸಲು Arbitrator ರವರನ್ನು ನೇಮಕ ಮಾಡಲು ದಾವೆ ಹೂಡಿದ್ದರು. ಸದರಿ ದಾವೆಯಂತೆ ಘನ ನ್ಯಾಯಾಲಯವು Arbitrator ರವರನ್ನು ದಿನಾಂಕ:29/02/2024 ರಂದು ನೇಮಿಸಿ ಆದೇಶ ಮಾಡಿರುತ್ತಾರೆ. ಪ್ರಸ್ತುತ Arbitration ಪ್ರಗತಿಯಲ್ಲಿರುತ್ತದೆ.<br><br>NKUSIP ಯೋಜನೆಯಡಿ 6 ನಗರಗಳಾದ ಹಾವೇರಿ, ಗದಗ-ಬೆಟಗೇರಿ, ಬಳ್ಳಾರಿ, ಹೊಸಪೇಟೆ, ರಾಯಚೂರು ಮತ್ತು ಸಿಂಧನೂರು 24x7 ಕುಡಿಯುವ ನೀರು ಸರಬರಾಜು ಕಾಮಗಾರಿಗಳು ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | KUIDFC ಅನುದಾನಿತ ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟದ ನಿರ್ಮಾಣವನ್ನು ತಡೆಯಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ; | KUIDFC ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿಶ್ವಬ್ಯಾಂಕ್ ರವರ ನಿಯಮದಂತೆ ಯೋಜನಾ ಸಮಾಲೋಚಕರನ್ನು ನೇಮಿಸಿಕೊಳ್ಳಲಾಗಿದೆ.<br><br>ಯೋಜನೆಗೆ ಉಪಯೋಗಿಸುವ ಸಾಮಾಗ್ರಿಗಳನ್ನು ಪೂರ್ವದಲ್ಲಿಯೇ ಕರಾರಿನ ನಿಯಮಾನುಸಾರ ಹಾಗೂ IS ನಲ್ಲಿ ನಿಗಧಿಪಡಿಸಿರುವ ರಿತ್ಯಾ ಪರಿಶೀಲಿಸಿ, ಪರೀಕ್ಷಿಸಿ ಉಪಯೋಗಿಸಲಾಗುತ್ತಿದೆ.<br><br>ಪರೀಕ್ಷಿಸುವ ಸಮಯದಲ್ಲಿ ದೋಷ ಕಂಡುಬಂದಲ್ಲಿ ಸದರಿ ಸಾಮಗ್ರಿಗಳನ್ನು ತಿರಸ್ಕರಿಸಲಾಗುತ್ತಿದೆ.<br><br>ಕಾಮಗಾರಿ ನಿರ್ಮಾಣ ಮಾಡಿದ ನಂತರ, ಕರಾರಿನ ನಿಯಮಾನುಸಾರ ಪರೀಕ್ಷಿಸಲಾಗುವುದು, ಉದಾ: ಅಳವಡಿಸುವ ಎಲ್ಲಾ ಕೊಳವೆ ಮಾರ್ಗಗಳನ್ನು Field Hydro Test ಮಾಡಲಾಗುತ್ತಿದೆ.<br><br>Field Hydro Test ಸಮಯದಲ್ಲಿ ದೋಷ ಕಂಡು ಬಂದಲ್ಲಿ, ದೋಷವನ್ನು ಸರಿಪಡಿಸಿ ಪುನಃ Fild Hydro Test ನ್ನು ನಿರ್ವಹಿಸಲಾಗುತ್ತಿದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | ಕಾಮಗಾರಿಯ ಪ್ರತಿಯೊಂದು ಅಂಶಗಳನ್ನು ಕರಾರಿನ ನಿಯಮಾನುಸಾರ ಹಾಗೂ Technical Specification ಪ್ರಕಾರ ಸಾಮಾಗ್ರಿಗಳ ಗುಣಮಟ್ಟ ಪರೀಕ್ಷಿಸಿ, ಗುಣಮಟ್ಟದ ನಿರ್ಮಾಣ ಕಾಮಗಾರಿ ಅನುಷ್ಠಾನಗೊಂಡ ನಂತರ ಸಮಾಲೋಚಕರು ಗುಣಮಟ್ಟದ ದೃಡೀಕರಣದ ನಂತರ ಸದರಿಯವರ ಶಿಫಾರಸ್ಸಿನ ಮೇರೆಗೆ ಬಿಲ್ಲುಗಳ ದಾಖಲೆಗಳನ್ನು ಪರಿಶೀಲಿಸಿ ಬಿಲ್ಲುಗಳನ್ನು ಪಾವತಿ ಮಾಡಲಾಗುತ್ತಿರುತ್ತದೆ.<br><br>ಕಳಪೆ ಗುಣಮಟ್ಟದ ಕಾಮಗಾರಿ ನಿರ್ವಹಿಸಿರುವ ಬಗ್ಗೆ ಯಾವುದೇ ದೂರುಗಳು ಬಂದಿರುವುದಿಲ್ಲ. |
| ಇ) | KUWSDB ಅಡಿಯಲ್ಲಿ ಬರುವ ಹಲವಾರು ನಗರ ಕುಡಿಯುವ ನೀರು ಸರಬರಾಜು ಯೋಜನೆಗಳು ಅಪೂರ್ಣ ಅಥವಾ ಕಾರ್ಯ ನಿರ್ವಹಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಕಾರಣವೇನು; | KUWSDB ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಕುಡಿಯುವ ನೀರು ಸರಬರಾಜು ಯೋಜನೆಗಳಲ್ಲಿ ಯಾವುದೇ ಯೋಜನೆಗಳು ಅಪೂರ್ಣವಾಗಿರುವುದಿಲ್ಲ. |
| ಈ) | ಕಳಪೆ ಗುಣಮಟ್ಟದ ನೀರಿನ ಪೈಪ್ ಲೈನ್ ಮತ್ತು ಒಳಚರಂಡಿ ಕಾಮಗಾರಿಗಳಿಗೆ ಕಾರಣರಾದ ಗುತ್ತಿಗೆದಾರರ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ; | ಕಳಪೆ ಗುಣಮಟ್ಟದ ನೀರಿನ ಕೊಳವೆ ಮಾರ್ಗದ ಬಗ್ಗೆ ಯಾವುದೇ ದೂರು ಬಂದಿರುವುದಿಲ್ಲ. ಕರಾರಿನ ನಿಯಮಾನುಸಾರ ಕಾಮಗಾರಿ ಪೂರ್ಣಗೊಂಡ ನಂತರದ 1 ವರ್ಷದ ಅವಧಿವರೆಗೂ ಗುತ್ತಿಗೆದಾರರೇ ದೋಷಗಳನ್ನು ಸರಿಪಡಿಸುವ / ಪುನರ್‌ನಿರ್ಮಾಣ ಮಾಡುವ ಹೊಣೆಗಾರಿಗೆ ಇರುತ್ತದೆ.<br><br>ಕರಾರಿನ ನಿಯಮಾನುಸಾರ ಉದ್ಯೋಗದಾತರಲ್ಲಿ ಗುತ್ತಿಗೆದಾರರು ನೀಡಿರುವ ಕಾರ್ಯಕ್ಷಮತಾ ಬ್ಯಾಂಕ್ ಗ್ಯಾರಂಟಿಗಳನ್ನು ದೋಷ ಹೊಣೆಗಾರಿಕೆ ಅವಧಿ ತೃಪ್ತಿಕರವಾಗಿ ಪೂರ್ಣಗೊಂಡ ನಂತರ ಬಿಡುಗಡೆ ಮಾಡಲು ಅವಕಾಶವಿರುತ್ತದೆ.<br><br>ಒಂದು ವೇಳೆ ಗುತ್ತಿಗೆದಾರರು ಕಾಮಗಾರಿಯ ದೋಷಗಳನ್ನು ಸರಿಪಡಿಸಲು ವಿಫಲವಾದಲ್ಲಿ ಕಾರ್ಯಕ್ಷಮತಾ ಬ್ಯಾಂಕ್ ಗ್ಯಾರಂಟಿಗಳನ್ನು ನಗಧೀಕರಿಸಿ ಸದರಿ ಮೊತ್ತದಿಂದ ದೋಷವನ್ನು ಸರಿಪಡಿಸಲು ಕರಾರಿನಲ್ಲಿ ಅವಕಾಶವಿರುತ್ತದೆ. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಊ) | KUWSDB ಯೋಜನೆಗಳಲ್ಲಿ ಹೆಚ್ಚಿನ ಶೇಕಡವಾರು ನೀರಿನ ಸೋರಿಕೆ (ಆದಾಯ ರಹಿತ) ನೀರು ಇದೆಯೇ; ಅದನ್ನು ಕಡಿಮೆ ಮಾಡಲು ಸರ್ಕಾರದಿಂದ ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ? | KUWSDB ಯೋಜನೆಗಳಲ್ಲಿ ಹೆಚ್ಚಿನ ಶೇಕಡವಾರು ನೀರಿನ ಸೋರಿಕೆ ಬಗ್ಗೆ ಯಾವುದೇ ಅದ್ಯಯನ ಮಾಡಿರುವುದಿಲ್ಲ. |

ಕಡತ ಸಂಖ್ಯೆ:ನಅಇ 33 ಪಿಆರ್‌ಜೆ 2026

**(ಬಿ. ಎಸ್. ಸುರೇಶ)**
ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು